

ಕರೆದುಕೊಂಡು ಹೊರಬಂದಳು. ಮನೆಮುಂದಿನ ಗೂಡಿನಲ್ಲಿ ಇದ್ದ ತನ್ನ ರಬ್ಬಲ್ ಚಪ್ಪಲಿಯನ್ನು ರಾಮುವಿಗೆ ತೊಡಿಸಿ ಕರೆದುಕೊಂಡು ಬಂದು ಊರ ಮುಂದಿನ ಹಳ್ಳ ದಾಟಿಸಿ, 'ಇಲ್ಲಿಂದ ಮುಂದೆ ನೀನೆ ನಿಮ್ಮ ಮನೆಗೆ ಹೋಗು' ಅಂತ ಹೇಳಿ ಅವನು ಮರೆಯಾಗುವವರೆಗೂ ನಿಂತು ವಾಪಸ್ಸಾದಳು.

## 6

ಗಾಳಿಪಟ ಹಿಡಿದ ಹುಡುಗರು ಮತ್ತು ಆಕಾಶ ಅಂತ ಹೆಸರಿನ ಮೇಲೆ ಚಿತ್ರ ಬಿಡಿಸುವುದಿತ್ತು. ರಾಮು ತುಂಬ ಸಲ ಆ ಚಿತ್ರಾನ ಬಿಡಿಸಿದ್ದ. ಆದರೆ, ಈಗ ಚಿತ್ರ ಬಿಡಿಸುವುದಕ್ಕೆ ಹೋದರೆ ಅದರಲ್ಲಿ ಮನಸ್ಸು ಬಾರದೆ ಹೇಗಂದರೆ ಹಾಗೆ ಸೊಟ್ಟಪಟ್ಟ ಹೋಗುತ್ತಿತ್ತು. ಪಕ್ಕದಲ್ಲಿ ಕುಳಿತ ಹುಡುಗರು ಇವನಿಗಿಂತ ವೇಗವಾಗಿ ಬಿಡಿಸುತ್ತ ಬಣ್ಣ ಬಳಿಯುತ್ತ ಚಿತ್ರ ಬಿಡಿಸುವುದರಲ್ಲಿ ಮಗ್ನರಾಗಿದ್ದರು. ಒಮ್ಮೆ ಸುತ್ತಲೂ ಕಣ್ಣಾಡಿಸಿದ. ದೂರದಲ್ಲಿ ಲಚುಮಣ್ಣ ಮಾಷ್ಟ್ರ ಯಾರ ಜೊತೆಗೆ ಮಾತನಾಡುತ್ತ ನಿಂತಿದ್ದು ಕಣ್ಣಿಗೆ ಬಿತ್ತು. ಬೆಳಿಗ್ಗೆ ಬೈಕ್ ತಗೊಂಡು ಬಂದ ಲಚುಮಣ್ಣ ಮಾಷ್ಟ್ರ ರಾಮುವಿನ ಮನೆಯಲ್ಲೇ ತಿಂಡಿ ತಿಂದಿದ್ದರು. ರಾಮುವಿನ ಅಕ್ಕ ಶಾಂತ ತಿಂಡಿ ಆದಮೇಲೆ ಚಹಾ ತಗೊಂಡು ಬಂದು ಕೊಟ್ಟಾಗ ಹಿಗ್ಗಿ ಹೀರೆಕಾಯಿಯಾದರು. 'ರಾಮು ಜೊತೆ ಯಾರನ ಬನ್ನಿ ಜೊತೆಗೆ' ಅಂದರು ಶಾಂತನ ನೋಡುತ್ತ. ಪಾರ್ವತಿ 'ಮಾಸ್ತರೆ, ನೀವು ಕರಕಂಡು ಹೋಗಕತ್ತೀರಿ, ನಾವ್ಯಾಕ ಮತ್ತೆ ಸುಮ್ನೆ ದಂಡಕ್ಕೆ' ಅಂದಳು. 'ಅದು ಸರಿ ಅದು ಸರಿ' ಅನ್ನುತ್ತ ತಮ್ಮ ಗುಂಗರು ಕೂದಲನ್ನು ಹಿಂದಕ್ಕೆ ಎಳೆದುಕೊಂಡು 'ಶಾಂತ ಮೊದಲಿಗಿಂತ ಈಗ ಚೆಂದ ಆಗ್ಯಾಳ, ಗಂಡನ ಮನಿಗೆ ಹೋದಮ್ಯಾಲ' ಅಂತ ಚಹಾವನ್ನು ಸೊರಕ್ಕನೆ ಹೀರುತ್ತ ಹೇಳಿದರು. 'ಗಂಡನ ಮನೆಯಲ್ಲಿ ಉಣ್ಣಾಕ ತಿಂಬಾಕ ಏನೂ ಕಡಿಮೆಯಿಲ್ಲ. ಬಂಗಾರದಂತ ಗಂಡ ಅತ್ತೆ ಮಾವ ಸಿಕ್ಕಾರ' ಅಂದಳು.

'ರಾಮು, ಬೇಗ ಬೇಗ ರೆಡಿಯಾಗು, ಹೋಗಾಣ. ಈ ಸಲ ನೀನೆ ಫಸ್ಟ್ ಬರಬೇಕು' ಅಂತ ಅವನ ಹೆಗಲ ಮೇಲೆ ಕೈ ಹಾಕಿದರು.

ರಾಮುವಿಗೆ ಚಿತ್ರ ಬಿಡಿಸುವುದರಲ್ಲಿ ಇದ್ದ ಉತ್ಸಾಹ ಒಮ್ಮಿಂದೊಮ್ಮಿಗೆ ಹೊರಟುಹೋಗಿತ್ತು. ಲಚುಮಣ್ಣ ಮಾಷ್ಟ್ರ ನೋಡಿದಾಗಲೆಲ್ಲ ಅವನ ಸಹನೆಯ ಕಟ್ಟೆ ಒಡೆದು ಜೋರಾಗಿ ಕಿರಿಚಿಕೊಳ್ಳಬೇಕಿನಿಸುವಷ್ಟು ಕೋಪ ಬರುತ್ತಿತ್ತು. ಮನಸ್ಸಿಲ್ಲದೆ ಮನಸು ಮಾಡಿಕೊಂಡು ಅವರ ಬೈಕ್ ಮೇಲೆ ಕುಳಿತು ಬಂದಿದ್ದ. ಇವನು ಚಿತ್ರ ಬಿಡಿಸುವುದನ್ನು ನೋಡುವ ಸಲುವಾಗಿ ಒಮ್ಮೆ ಮಧ್ಯೆ